

ಮಂಗಳೂರಿನ ಪಣಂಬೂರು ಬೀಚ್‌ನಲ್ಲಿ ಸುಂದರ ಸೂರ್ಯಾಸ್ತ
ಚಿತ್ರ: ಗೋವಿಂದರಾಜ ಜವಳಿ

ಅಂತ ಹೇಳಿ ಮೈಲುತುತ್ತ ಕಲಸಿಟ್ಟು ಕಾದದ್ದೇ ಬಂತು. ಇಂವ ಮಲೆಮಂಗ ಎಲ್ಲಿದ್ದಾನೆ? ಭಾಷೆ ಕೆಟ್ಟವನಿಗೆ ಹೇಳಿದ ಮಾತು ಇದ್ರೆ ತಾನೆ! ಬರಲೇ ಇಲ್ಲ. ಬರೀ ಮಲೆಮಂಗ. ಸಾಲ ಬೇಕಿದ್ರೆ ಓಡಿ ಬರ್ತಾನೆ. ಮದ್ದು ಬಿಡ್ಲಿಕ್ಕೆ ಕರೆದ್ರೆ ಹೀಗೆ ಮಾಡ್ತಾನೆ. ಆಮೇಲೆ ಶುರುವಾಯಿತು ನೋಡಿ ಅಶೋದ್ಧಾರ ಮಳೆ! ರೋಗ ಬಂತು, ಅಡಿಕೆ ಎಲ್ಲ ಈಗ ಬುಡದಲ್ಲಿ ಉಂಟು ಅಂತ ಪರಿತಾಪ ಹೇಳಿಕೊಳ್ತಾರೆ. ಮಲೆ ಮಂಗ ಎಂದು ಹೇಳಿದರೆ ಇಲ್ಲಿ ಅದಕ್ಕಿಂತ ದೊಡ್ಡ ಬೈಗುಳದ ಪದವೇ ಇಲ್ಲ.

ಈಗ ಉಡುಪಿ ಜಿಲ್ಲೆ ಬೇರೆ ಆಗಿದೆ. ಅವಿಭಜಿತವಾಗಿದ್ದಾಗ ಅಲ್ಲೊಂದು ವಿಧದ ಭಾಷೆ. ಮಂಗಳೂರಿಗೂ ಪುತ್ತೂರಿಗೂ ಭಾಷೆಯಲ್ಲಿ ಆನೆ, ಆಡಿನ ಅಂತರ. ಬೆಳ್ಳಾರೆಗೆ ಹೋದರೆ ಇನ್ನೊಂದು, ವಿಟ್ಲಕ್ಕೆ ಬಂದರೆ ಮತ್ತೊಂದು. ಕಾರ್ಕಳಕ್ಕೆ ಹೋಗಿ ಒಂದು ಮನೆಯಲ್ಲಿ ಊಟಕ್ಕೆ ಕುಳಿತುಕೊಂಡರೆ ಹಿರಿಯ ಮುತ್ತೈದೆ ಎಲೆಯ ಮೇಲೆ ಪಲ್ಯ, ಚಟ್ನಿ, ಉಪ್ಪಿನಕಾಯಿ, ಅನ್ನ ಸಾರು ಎಲ್ಲ ಬಡಿಸಿದ ಮೇಲೆ, ಇನ್ನೇನಾದರೂ ಬೇಕಿದ್ರೆ ಬೇಡಿಕೊಳ್ಳಿ ಎಂದು ಆದರದಿಂದ ಹೇಳುತ್ತಾರೆ. ಅಯ್ಯೋ ದೇವರೆ! ಬೇಡಲು ನಾನೇನು ಭಿಕ್ಷುಕನೆ? ಎಂದು ಬೇಸರಿಸಬೇಕಾಗಿಲ್ಲ. ಬೇಕಿದ್ದನ್ನು ಕೇಳಿ ಬಡಿಸಿಕೊಳ್ಳಿ ಎನ್ನುವ ಒಳಾರ್ಥ ಹೊಂದಿದ ಸಹೃದಯ ಮಾತು ಇಲ್ಲಿ ಬೇಡುವ ಹಂತಕ್ಕೆ ತಲುಪಿಬಿಟ್ಟಿದೆ.

ಅಪರೂಪಕ್ಕೆ ಉಡುಪಿಗೆ ಹೋದಾಗಲೂ ಅಷ್ಟೇ. ಬಹಳ ವರ್ಷಗಳ ಬಳಿಕ ಮಗ ಮುಂಬೈಯಿಂದ ಅವರ ಮನೆಗೆ ಹೋಗಿದ್ದಾನೆ. ಎಲ್ಲರಿಗೂ ಅವನನ್ನು ನೋಡಿ ತುಂಬ ಖುಷಿಯೂ ಆಗಿದೆ. ಪಕ್ಕದ ಮನೆಯವಳು, ಮಗ ಮುಂಬೈಯಿಂದ ಬಂದಿದ್ದಾನಂತೆ. ಹೇಗಿದ್ದಾನೆ ಸುಶೀಲಮ್ಮ? ಎಂದು ಕೇಳಿದರೆ ಆ ಅಮ್ಮ, ಎಂಥದ್ದು ವನಜಕ್ಕ, ಹುಡುಗ ಪೂರ್ತಿ ಹಾಳಾಗಿ ಹೋಗಿದ್ದಾನೆ ಎಂದೇ ಹೇಳುತ್ತಾರೆ. ಮುಂಬೈಗೆ ಹೋಗಿ ವ್ಯಾಪಾರ ವ್ಯವಹಾರ ಮಾಡಿ ಒಳ್ಳೆ ಸ್ಥಿತಿವಂತರಾದವರಿಗೆ ಲೆಕ್ಕವಿಲ್ಲ. ಹಾಗೆಯೇ ಹಾಳಾಗುವವರಿಗೂ ಅಲ್ಲಿ ಅವಕಾಶಗಳಿಗೆ ಕೊರತೆಯಿಲ್ಲ. ಹಾಗೇನಾದರೂ ಇವರ ಹುಡುಗ ದಾರಿ ತಪ್ಪಿದನಾ? ನಿಮಗೆ ಇಂಥದೊಂದು ಅನುಮಾನ ಬೇಡ. ಹುಡುಗ ಹಾಳಾಗಿದ್ದಾನೆ ಅಂದರೆ ಮುಂಬೈಯ ತಿಂಡಿ, ತಿನಿಸುಗಳ ರುಚಿ ಅವನಿಗೆ ಒಗ್ಗದೆ ದೇಹದಲ್ಲಿ ಕ್ಷೀಣವಾಗಿದ್ದಾನೆ, ಇಲ್ಲಿಯ ಹಾಗೆ ದುಂಡು ದುಂಡಗೆ ಇಲ್ಲ ಎಂದೇ ಅದರ ಅರ್ಥ ವಿನಃ ಎಲ್ಲರೂ ಭಾವಿಸಿದಂತೆ ಹುಡುಗ ನಡತೆ ಕೆಟ್ಟು ಹೋಗಿರುವ ಧ್ವನ್ಯರ್ಥ ಅಲ್ಲ.

ತುಂಬ ವಾಚಾಳಿ ವ್ಯಕ್ತಿಯೊಬ್ಬ ನಾಲ್ಕು ಜನರ ಮುಂದೆ ಕುಳಿತುಕೊಂಡು ಪ್ರತಿಷ್ಠೆ ಕೊಚ್ಚಿಕೊಳ್ಳಬಹುದು. ತಾನು ಅಮೆರಿಕೆಗೆ ಹೋಗಿ ಟ್ರಂಪ್ ಸಾಹೇಬರ ಒಟ್ಟಿಗೆ ಕುಳಿತು ನಾಷ್ಟಾ ಮಾಡಿ ಬಂದುದಾಗಿ ಹೇಳಬಹುದು. ಕೇಳುತ್ತ ಕುಳಿತವರು ಬಾಯ್ತೆರೆದು ಹೌದಾ? ಎಂದು ಆಶ್ಚರ್ಯ ಭಾವ ವ್ಯಕ್ತಪಡಿಸುತ್ತಾರೆ. ತಾನು ಇವರನ್ನು ತನ್ನ ವಾಕ್ ಚಾತುರ್ಯದಿಂದ ಮೋಡಿ ಮಾಡಿದೆ ಎಂದು ಭಾವಿಸಿ ಆ ಮಹಾಶಯ ಎದ್ದು ಹೋದ ಮೇಲೆ ಅಲ್ಲಿದ್ದವರು ಕಿಸಕ್ ಅಂತ ನಕ್ಕುಬಿಡ್ತಾರೆ. ಮಾತಾಡ್ತಾನೆ ಮಾತಾಡ್ತಾನೆ, ಕೊಚ್ಚಿ ಕೊಳ್ಳುವುದಕ್ಕೆ ಒಂದು ಇತಿಮಿತಿ ಬೇಕು ಮಾರಾಯ್ರೇ. ಒಟ್ರಾಸಿ ಮಾತು. ಒಂದಕ್ಕೂ ಪೀಂಕಾಣು (ತಿಕ) ಬಾಯಿ ಇಲ್ಲ. ಇದನ್ನೆಲ್ಲ ನಂಬಿದ್ರೆ ಉಂಟಲ್ಲ, ಎಂತದ್ದೂ ಮಾಡಬಹುದು ಎಂದು ಹೇಳದೆ ಅಲ್ಲಿಂದ ಏಳುವುದಿಲ್ಲ.

ಸಾಲ ಕೊಟ್ಟವ ಬಂದು ಮರಳಿ ಕೇಳಿದಾಗ ಸಾಲ ಪಡೆದವ ಉಲ್ಟಾ ಮಾತನಾಡುವುದು ಎಲ್ಲ ಕಡೆಯೂ ಇರುವ ವಿಷಯ. ಇಲ್ಲಿ ಹಾಗೆ ಏನಾದ್ರೂ ಕೇಳಿದರೆ, ನಾನೇನು ನಿಮ್ಮ ಹಣ ತಿಂದು ಹಾಕ್ತೇನೆ ಅಂತ ಹೀಗೆ ಮಾತಾಡುವುದಾ? ಹೆಚ್ಚಿಗೆ ಕೇಳಿದ್ರೆ ಒಂದು ಮುಕ್ಕಾಲು ಕೊಡ್ಲಿಕ್ಕಿಲ್ಲ. ಏನ್ ಮಾಡ್ತೀರೋ ಮಾಡಿ ಅಂತ ಸವಾಲು ಹಾಕಿದನೋ ಸಾಲ ಕೊಟ್ಟವ ಕೆರಳಿ ಕೆಂಡವಾಗುತ್ತಾನೆ. ಇನ್ನೇನು, ಫಡಫಡ ಎಂದು ಹಳಿಯದಿರೆಲೋ ಮೂಢ ಎಂದು ಹೇಳುತ್ತಾನೆಂದು ನೀವು ಭಾವಿಸಿದರೆ ಅದು ತಪ್ಪು, ಬೈಗುಳದಲ್ಲೂ ಮರ್ಯಾದಿಯ ಪದ ಬೇಕು ಅಂದರೆ ಕರಾವಳಿಯ ಈ ಜಿಲ್ಲೆಗೇ ಬರಬೇಕು. ಸಾಲ ಕೊಟ್ಟಾತ, ನಿನ್ನ ಪೆದಂಬು (ಉಲ್ಟಾ) ನನ್ನ ಬಳಿ

## ಮನದ ಭಾಷೆಯ ‘ಚೆನ್ನುಡಿ’

‘ನಾವಾಡುವ ನುಡಿಯೇ ಕನ್ನಡ ನುಡಿ’ ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ ‘ಚೆನ್ನುಡಿ’ ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.

ಕರ್ನಾಟಕದ ವಿವಿಧ ಜಿಲ್ಲೆಗಳ ನುಡಿಸೊಬಗನ್ನು ಪರಿಚಯಿಸುತ್ತಿರುವ ‘ಚೆನ್ನುಡಿ’ ಅಂಕಣಕ್ಕೆ ನೀವೂ ಬರೆಯಬಹುದು. ನಿಮ್ಮೂರಿನ ಭಾಷೆಯ ಸೊಗಡನ್ನು ಓದುಗರೊಂದಿಗೆ ಹಂಚಿಕೊಳ್ಳಬಹುದು. ಲೇಖನ 1000 ಪದಮಿತಿಯಲ್ಲಿ, ನುಡಿ ಅಥವಾ ಯುನಿಕೋಡ್‌ನಲ್ಲಿರಲಿ. ಇಮೇಲ್–
**editorsu@sudha.co.in**



ಕುದ್ರೋಳಿ ಗೋಕರ್ಣನಾಥ ದೇವಸ್ಥಾನ
ಚಿತ್ರ: ಫಕ್ರುದ್ದೀನ್ ಎಚ್.